## ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಸಿ.ಸಿ. ನಂಃ 693/2025**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು ಯಾದಗಿರಿ, ಈ ಕೆಳಗಿನ ಆರೋಪಿ.**

**ಫಿರ್ಯಾಧಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೋಲಿಸ ಠಾಣೆ**

**// ವಿರುದ್ಧ //**

**ಆರೋಪಿತರು** : ಪ್ರಭಾಕರನ್

| | |
|---|---|
| **ಆರೋಪಿತರುಃ 1.** | ಪ್ರಭಾಕರನ್ ತಂದೆ ಈಶ್ವರಮೂರ್ತಿ. ವಃ 36 ವರ್ಷ, |

### ಆಪಾದನೆಯ ಸಾರಾಂಶ

ದಿನಾಂಕಃ 11-03-2025 ರಂದು ರಾಃ 08-25 ಗಂಟೆಗೆ ಸೈದಾಪೂರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಕಡೇಚೂರು ಗ್ರಾಮ ಸೀಮಾಂತರದ ಬೀದರ ಗುತ್ತಿ ರಾಷ್ಟೀಯ ಹೆದ್ದಾರಿ ಕಡೇಚೂರು ಗ್ರಾಮ ಸೀಮಾಂತರದ ಕೆ.ಐ.ಎ.ಡಿ.ಬಿ ಸಮೀಪ ರಸ್ತೆಯ ಪಕ್ಕಕ್ಕೆ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿ ದೀಪಕ ತಂದೆ ಗಜೇಂದ್ರಕುಮಾರ ಈತನಿಗೆ ಆರೋಪಿಯಾದ ನೀನು ಕಾರ ನಂಬರ ಟಿ.ಎನ್.21-ಬಿ.ಕ್ಯೂ-7206 ನೇದ್ದನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿ ಕಾರನ್ನು ನಿಯಂತ್ರಿಸದೆ ಡಿಕ್ಕಿಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 281 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀನು ನಿನ್ನ ಕಾರನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿ ದೀಪಕ ತಂದೆ ಗಜೇಂದ್ರಕುಮಾರ ಕಾರನ್ನು ಡಿಕ್ಕಿಪಡಿಸಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದರಿಂದ ಸ್ಥಳದಲ್ಲಿ ಮೃತಪಟ್ಟಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 106(1) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ಆಪಾದನೆ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

ದಿನಾಂಕ 30-10-2025

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.**